ಇಸ್ತಿಹಾರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 15ನೇ ಏಪ್ರೆಲ್ 1895.

ಇದರಿಂದ ಸಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟ್ ಶಿರಾ ತಾಲ್ಲೂಕು ಸರ್ವೆಸೆಟ್ಲ್‌ಮೆಂಟ್ ಆಗಿ 25 ವರುಷಗಳು ಆಗುತ್ತಾ ಬಂದಿರುವ ಪ್ರಯುಕ್ತ ಸ್ಯ 1895ನೇ ಇಸವಿ ಮಾರ್ಚ್ 11ನೇ ಮಾರ್ಕ್ಹಂ 14523—30—R. F. 157—93ನೇ ನಂಬರು ಗವರ್ನ್‌ಮೆಂಟ್ ಆರ್ಡರನ್ನನುಸರಿಸಿ ಸದರೀ ತಾಲ್ಲೂಕು ಕಚೇರಿ ರಿಕಾರ್ಡಿನಲ್ಲಿ ಇರುವ 1807—1808ನೇ ಪ್ರಭವ ಸಾಲ್ ಲಾಗಾಯತು 1869—70ನೇ ಕುಕ್ಲ ಸಾಲ್ ವರಿಗಿನ ಪಟ್ಟಿಚಿಟ್ಟೆ ಮತ್ತು ಕುಳವಾರು ಚಿಟ್ಟೆ ಲೆಕ್ಕಗಳು ಜಲಾಯಿಸಲ್ಪಡುತ್ತವೆ.

ಸದರೀ ಚಿಟ್ಟೆ ಲೆಕ್ಕಗಳ ನಕಲುಗಳನ್ನು ಪಡಿಯಲು ಅಪೇಕ್ಷೆವುಳ್ಳವರು ಈ ತಾರೀಖು ಲಾಗಾಯತು 6 ತಿಂಗಳ ಒಳಗಾಗಿ ಶಿರಾ ತಾಲ್ಲೂಕು ಅಮಲ್‌ದಾರ್‌ರಿಗೆ ಬರದುಕೊಂಡು ನಕಲುಗಳನ್ನು ಪಡಿಯಬಹುದು ಆ ವಾಯಿದೆ ಆದ ನಂತರ ನಕಲುಗಳು ದೊರಯಲಾರವು.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 19ನೇ ಏಪ್ರೆಲ್ 1895.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಾಯಂಗುತ್ತಾ ಬಾಕೀದಾರರಾದ ಕೃಷ್ಣರಾವ್ ವಗೈರೇರಿಂದ ಬರಬೇಕಾದ ಕಾಯಂಗುತ್ತಾ ಬಾಕಿಗಾಗಿ ಇದರಡಿ ಫುರ್ ಫಿಟ್ಟ್ಯಾಗಿರುವ ನಮೂದಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಅಮಲದಾರ್ರ ಕಚೇರೀಲಿ 1895ನೇ ಮೇ 31ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾನ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಾಯಂಗ್ಯತ್ತಾ ವೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಯೀಲ್ ಮೇರೆಗೆ 1001—6—7 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ವೊಬಲಗಿನ ಕೇಕಡಾ 25ನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ವೊಬಲಗು ಹರಾಜು ತಾರೀಖು ಲಾಗಾಯಿತು ದಿವಸಗಳಲ್ಲಿ ಪಾವತಿಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ವೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂತಾ ಡಿಪಾಜಿಟ್ಟು ವೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ವೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ವೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ, ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ, ಎಂಬ ಅಂಶವನ್ನು ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್‌ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ವೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರು ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲಿ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನ್‌ಮೆಂಟನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟನವರಿಗೆ ಅಪ್ಪೀಲ್‌ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು	ಹೋಬಳಿ	ಗ್ರಾಮ.	ಖಾತೆದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ ತರೀ ಬಾಗಾಯಿತು ಸಾಲೀಯಾ	ಸ್ಯಾರ್ಪ. ಖ. ಕೊ.	ಅಕಾರ. ರೂ. ಆ. ಪೈ.	ಸರ್ಕಾರಕ್ಕೆ ಬರಬೇಕಾದ ಸೊಟ್ಟನ ಸ್ಯಾನ ಸಯತನಾದ ಬಾಕೀ ಜೊಬಲಗನು. ರೂ. ಆ. ಪೈ.
1	2	3	4	5	6	7	8	9	10	11
ಕೊಪ್ಪಾರ.	ಪಳ್ಳನೂರು.	ಪಲ್ಲನೆಂದ್ರ ಬಾಯಂ ಗುತ್ತಾ	1 ಕೃಷ್ಣಪ್ಪನ 2 ಸುಬ್ಬರಾಜ 3 ಗರುರಾಜ	..	ರೂ. ಆ. ಪೈ.	ಪೂರಾಣಾಜನ.	ಖುಷ್ಕಿ ತರೀ ಬಾ ಗಾಯಿತು ಸಾಲೀಯಾ	ಖ. ಕೊ. 45 6½ ನಾ ನರ	ರೂ. ಆ. ಪೈ. 148 1 2 ಕಾರ ಕ್ಕೆ ಕೊ 97 6 5	ರೂ. ಆ. ಪೈ. 97 6 5 ಡಬೆಕಾ ದ್ದು
	ಜೇನುಗಲ್.	ಕ್ಯಾಲನೂರು. ಬಾಯಂಗುತ್ತಾ.	ರಾಮಪ್ಪ.	..	.. .. ..	ಪೂರಾಣಾಜನ.	ಖುಷ್ಕಿ ತರೀ ಬಾ ಗಾಯಿತು ಸಾಲೀಯಾ	62 19⅞ ನಾ ನರ	1358 13 5 ಕಾರ ಕ್ಕೆ ಕೊ 1535 12 1 ಟೋಟ ಲ್.	904 0 2 ಡಬೆಕಾ ದ್ದು 1001 6 7

* ಕಾಯಂಗುತ್ತಾದಾರ್ರು ಆಗಲಿ ಅವರ ಹಿರಿಯರೇ ಆಗಲಿ ಭೋಗ್ಯ ವಗೈರೆ ಮಾಡಿದ ಭೂವಿಲ್ಲದೆ ಹರಾಜು ಮಾಡಲ್ಪಡುತ್ತೆ.

ಸಿ. ಮಾದಯ್ಯ.
ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ಪ್ರಕಟನೆ.

ತಾರೀಖು 23ನೇ ಏಪ್ರೆಲ್ 1895ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗ, ಮದ್ದಗಿರಿ, ಪುಲಿಯೂರುದುರ್ಗ ಮತ್ತು ಬುಕ್ಕಾಪಟ್ಟಣ ಸ್ಟೇಟ್ ಫಾರೆಸ್ಟುಗಳಲ್ಲಿ ಜವಾಯಿಸಲ್ಪಟ್ಟ 1894—95ನೇ ಸಾಲ್ ಪಸಾರೆ ಜಿನಸಿಗಳು ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುವದು.

ಸ್ಯ 1895ನೇ ಇಸವಿ ಮೇ ತಾರೀಖು 8ರಲ್ಲು ತುಮಕೂರು ಡಿಪೋದಲ್ಲಿ..

ತಪಸೀಲ್.			ಪಲ್ಲ.	ಮಣ.	ಸೇರು.	
ಅಳಲೇಕಾಯಿ	..	..	..	252	..	ಸುಮೊರು
ಜೇನುತುಪ್ಪ	..	..	..	6	4	ಡಿಟೋ
ಜೇನುಮೇಣ	..	..	..	..	5	ಡಿಟೋ
ಗೇರುಬೀಜ	..	..	..	...	35	ಡಿಟೋ
ಪಟ್ಟಿ ಚಕ್ಕೆ	..	..	..	60	..	ಡಿಟೋ
ನೀಲಿ	..	..	..	4	38	ಡಿಟೋ
ಹೆಬಲಾರಂಗು	..	..	..	2	6	ಡಿಟೋ
ಅರಗು	..	..	..	13	3	ಡಿಟೋ
ಹೊಂಗೇಬೀಜ	...	..	..	..	99	ಡಿಟೋ
ದುಪ್ಪಿಕೊಂಬು	..	..	..	..	7	ಅದದು
ಹುಣಸೇಹಣ್ಣು	..	..	..	94	..	ಸುಮೊರು
ಸೀಗೇಕಾಯಿ	..	...	..	8	..	ಡಿಟೋ